- -                ಓ. ಎಸ್. ನಂ. 458/07
ಪಿಡಬ್ಲ್ಯೂ : 02

(ಇಂದು ದಿನಾಂಕ 29-06-2015 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು)

ಪಾಟಿ ಸವಾಲು :- ಶ್ರೀ. ಪಿ.ಜೆ.ಆರ್. ರವರಿಂದ :-

ಐದನೇ ಪ್ರತಿವಾದಿ ನನಗೆ ಸುಮಾರು 15 ವರ್ಷಗಳಿಂದ ಗೊತ್ತು, ಅವರ ತಾಯಿ ಚಂತಲ-ಮಡಿವಾಳ ಗ್ರಾಮದಲ್ಲಿ ಇದ್ದರು ಮತ್ತು ಅವರು ಎಲ್ಲಿ, ಹೇಗೆ ಮತ್ತು ಯಾವ ಕಾಯಲೆಯಿಂದ ತೀರಿಕೊಂಡರು ನನಗೆ ಗೊತ್ತಿಲ್ಲ, ದಿನಾಂಕಃ 27-07-2002 ರಂದು ನಾನು ನಮ್ಮರೂ ಜಿಗಳಾ ಗ್ರಾಮದಲ್ಲಿ ಇದ್ದೆ. ದಿನಾಂಕಃ 13-08-2002 ರಲ್ಲಿ ಆನೇಕಲ್ ಉಪನೋಂದಣಾಧಿಕಾರಿಯ ಕಛೇರಿಗೆ ಬಂದಿದ್ದೆ. ಸದರಿ ಕಛೇರಿಗೆ ಜಾತಿ ಪ್ರಮಾಣ ಪತ್ರ ಪಡೆಯಲು ಬಂದಿದ್ದೆ ಆನಂತರ ಅಲ್ಲೆ ಇದ್ದೆ. ಆನಂತರ ಚಂದ್ರಮ್ಮನ ತಾಯಿಯ ಕೋರಿಕೆಯ ಮೇರಿಗೆ ಉಪನೋಂದಣಾಧಿಕಾರಿಯ ಕಛೇರಿಯಲ್ಲಿ ಪತ್ರಕ್ಕೆ ಸಹಿ ಮಾಡಿದ್ದೆ. ಆನಂತರ ಊರಿಗೆ ಹೋದೆ, ನಾನು ಸಹಿ ಮಾಡಿದ ಪತ್ರದಲ್ಲಿ ಎನು ಬರೆದಿತ್ತು ಎಂದು ನನ್ನಗೆ ಗೊತ್ತಿಲ್ಲ. ಸದರಿ ಪತ್ರಕ್ಕೆ ಬೇರೆ ಯಾರು ಯಾರು ಸಹಿ ಮಾಡಿದರು ನನಗೆ ಗೊತ್ತಿಲ್ಲ ಸದರಿ ಪತ್ರಕ್ಕೆ ನನ್ನ ಮುಂದೆ ಬೇರೆ ಯಾರು ಸಹಿ ಮಾಡಿಲ್ಲ. ಸದರಿ ಪತ್ರವನ್ನು ಎಲ್ಲಿ ಬೆರಳಚ್ಚು ಮಾಡಿಸಿದರು ನನಗೆ ಗೊತ್ತಿಲ್ಲ, ಆ ಸಮಯದಲ್ಲಿ ಚಂದ್ರಮ್ಮ ಇರಲಿಲ್ಲ, ಸದರಿ ಪತ್ರ ಎನು ಪತ್ರ ಎಂದು ಗೊತ್ತಿಲ್ಲ.

(ಈ ಹಂತದಲ್ಲಿ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟಿ ಸವಾಲು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಎ ನು.,

ಸಿನಿಯರ್ ಸಿ.ಜೆ., ಆನೇಕಲ್.